ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪನೆ.

1072. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್) :– ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

1. ಮುಂಬರುವ ವರ್ಷಗಳಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆ;
2. ಬೀದರ್ ಜಿಲ್ಲೆಯಲ್ಲಿ ಎಷ್ಟು ಮಹಿಳಾ ಐ.ಟಿ.ಐ. ಕೇಂದ್ರಗಳಿವೆ.
3. ಇಲ್ಲದಿದ್ದಲ್ಲಿ ಅತೀ ಹಿಂದುಳಿದ ಜಿಲ್ಲೆಯಾಈ ಬೀದರ್‌ನಲ್ಲಿ ಮುಂಬರುವ ವರ್ಷದಲ್ಲಿ ಮಹಿಳಾ ಐ.ಟಿ.ಐ. ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;
4. ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಸಚಿವರು) –

1.. 1. ಬೆಂಗಳೂರು ಜಿಲ್ಲೆ.
2. ತುಮಕೂರು ಜಿಲ್ಲೆ.
3. ಕೋಲಾರ ಜಿಲ್ಲೆ.
4. ದಕ್ಷಿಣ ಕನ್ನಡ ಜಿಲ್ಲೆ.
5. ಹಾಸನ ಜಿಲ್ಲೆ.
6. ಬಿಜಾಪುರ ಜಿಲ್ಲೆ ಮತ್ತು
7. ಚಿತ್ರದುರ್ಗ ಜಿಲ್ಲೆ.

2. ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ ಬೀದರ್ ಜಿಲ್ಲೆಯಲ್ಲಿ ಇಲ್ಲ.
3. ಸಧ್ಯಕ್ಕೆ ಇಲ್ಲ. ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಪರಿಶೀಲಿಸಲಾಗುವುದು.
4. ಆರ್ಥಿಕ ಸೌಲಭ್ಯವಿಲ್ಲದಿರುವುದರಿಂದ.

ಶುಶ್ರೂಷಾ ಯೋಜನೆಯ ಪ್ರಗತಿ.

1076. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ–

ಅ) ಶುಶ್ರೂಷಾ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು;
ಆ) ಈ ಪೈಕಿ ಇದುವರೆವಿಗೂ ಪ್ರತಿ ಜಿಲ್ಲೆಯಲ್ಲಿ ಎಷ್ಟು ಹಣವನ್ನು ಮೇಲ್ಕಂಡ ಯೋಜನೆಯ ಸಲುವಾಗಿ ವೆಚ್ಚ ಮಾಡಲಾಗಿದೆ;
ಇ) ಈ ಯೋಜನೆಯ ಸಲುವಾಗಿ ಎಷ್ಟು ಸಿಬ್ಬಂದಿ ವರ್ಗದವರನ್ನು ನೇಮಿಸಿಕೊಳ್ಳಲಾಗಿದೆ (ಹುದ್ದೆವಾರು ವಿವರಗಳನ್ನು ಜಿಲ್ಲಾವಾರು ಅಂಕಿ–ಅಂಶಗಳಲ್ಲಿ ನೀಡುವುದು) ;
ಈ) ಇದಕ್ಕಾಗಿ ಎಷ್ಟು ವಾಹನ ಹಾಗೂ ಉಪಕರಣಗಳನ್ನು ಖರೀದಿಸಲಾಗಿದೆ. ಇದಕ್ಕೆ ತಗುಲಿದ ವೆಚ್ಚವೆಷ್ಟು;
ಉ) ಇದರಿಂದ ಎಷ್ಟು ಜನರಿಗೆ ಲಾಭವಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ರೂ. 54.30 ಲಕ್ಷ ರೂಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.
ಆ) ಜನವರಿ 31, 1992 ರ ಅಂತ್ಯದವರೆಗೆ ಒಟ್ಟು ರೂ. 11,20,678. (ಜಿಲ್ಲಾವಾರು ವೆಚ್ಚದ ವಿವರಗಳನ್ನು ತಃಖ್ತೆಯಲ್ಲಿ ಲಗತ್ತಿಸಿದೆ)
ಇ) ಯಾರನ್ನೂ ನೇಮಿಸಿಲ್ಲ.